ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಹೊಸದುರ್ಗ

ಉಪಸ್ಥಿತರು: ಶ್ರೀಮತಿ ತ್ರಿನೇತ್ರ.ಎಂ.ಎನ್.
ಎಂ.ಎ., ಎಲ್.ಎಲ್.ಬಿ.,
ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ

ಕ್ರಿಮಿನಲ್ ಮೊಕದ್ದಮೆ ಸಂ.**2072/2025**

| | |
|---|---|
| ಫಿರ್ಯಾದುದಾರರು: | ಕರ್ನಾಟಕ ಸರ್ಕಾರದ ಪರವಾಗಿ ಶ್ರೀರಾಂಪುರ ಪೋಲಿಸ್ ಠಾಣೆ. |
| | ವಿರುದ್ಧ |
| ಆರೋಪಿತರು: | ಚಂದ್ರಶೇಖರ್ ಆರ್.<br>ತಂದೆ ರಾಮಚಂದ್ರನಾಯ್ಕ,<br>ಸುಮಾರು 40 ವರ್ಷ,<br>ವೃತ್ತಿ: ಚಾಲಕ,<br><br>ವಾಸ: ಕೆರೆಹೊಸಹಳ್ಳಿ ಗ್ರಾಮ,<br>ಹೊಸದುರ್ಗ ತಾಲ್ಲೂಕು. |

## ದೋಷಾರೋಪಣೆ

ನಾನು ತ್ರಿನೇತ್ರ ಎಂ.ಎನ್. ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ, ಆಪಾದಿಸುವುದೇನೆಂದರೆ,

ಹೊಸದುರ್ಗ ತಾಲೂಕು, ಕೆರೆಹೊಸಹಳ್ಳಿ ಗ್ರಾಮದಲ್ಲಿ ಚಾಸಾ.1 ಪೂಜಾ ಎಸ್. ರವರು ಮೇಲೆ ಹೇಳಲಾದ ಆರೋಪಿಯಾದ ನಿಮ್ಮನ್ನು ಸುಮಾರು 10 ವರ್ಷಗಳ ಹಿಂದೆ ಮದುವೆಯಾಗಿದ್ದು, ಮದುವೆಯಾದ ಪ್ರಾರಂಭದಲ್ಲಿ ಆರೋಪಿಯಾದ ನೀವು ಚಾಸಾ.1 ರವರೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದು ಸದರಿಯವರಿಗೆ ಇಬ್ಬರು ಮಕ್ಕಳಿರುತ್ತಾರೆ, ತದನಂತರ ಆರೋಪಿಯು ಈಗ್ಗೆ ಸುಮಾರು 3-4 ವರ್ಷಗಳಿಂದ ಪ್ರತೀ ದಿನ ಕುಡಿದು ಬಂದು ಮನೆ, ಸಂಸಾರ ಮಕ್ಕಳು ಅಂತ ನೋಡದೇ ಗಲಾಟೆ ಮಾಡಿ, ಕೈಕಾಲುಗಳಿಂದ ಹೊಡೆಯುವುದು, ಕುಡಿಯಲು ನನಗೆ ಹಣ ಕೊಡು ಎಂದು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದು ಭಾರತೀಯ ನ್ಯಾಯ

ಸಂಹಿತೆ ಕಲಂ 85 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಆರೋಪಿಯು ಚಾಸಾ.1 ರವರಿಗೆ ನೀನು ನಿನ್ನ ತವರು ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಗಲಾಟೆ ಮಾಡಿ ಬೈಯುವುದು ಹೊಡೆಯುವುದು ಮಾಡಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದು, ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ. 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ದಿನಾಂಕ 15.09.2025 ರಂದು ರಾತ್ರಿ 11 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಮದ್ಯಪಾನ ಮಾಡಿಕೊಂಡು ಬಂದು ಚಾಸಾ.1 ರವರ ಶಾಂತಿ ಭಂಗವನ್ನುಂಟು ಮಾಡುವ ಉದ್ದೇಶದಿಂದ ಅವರಿಗೆ ಏನೇ ಬೋಸೂಡಿ, ಅಲ್ಕಾಮುಂಡೆ ಮನೆ ಬಿಟ್ಟು ಹೋಗು ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಭಾರತೀಯ ನ್ಯಾಯ ಸಂಹಿತೆ ಕಲಂ 352 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಮುಂದುವರೆದು ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗೊಳಿಸಿದ್ದರಿಂದ, ಅದರನ್ವಯ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

<u>ಆಪಾದನೆ</u>

ಪ್ರಶ್ನೆ.1:- ಈಗ ಮೇಲೆ ಓದಿ ಹೇಳಲಾದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರ:-

ಪ್ರಶ್ನೆ.2:- ನೀವು ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ:-

(ಸದರಿ ಆಪಾದನೆಯ ಸಾರಾಂಶವನ್ನು ಆರೋಪಿತರಿಗೆ ಓದಿ ತಿಳಿಸಿ ಹೇಳಿ ಅವರಿಂದ ಬಂದ ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 14.05.2026 ರಂದು ಬರೆದುಕೊಳ್ಳಲಾಯಿತು ಎಂದು ಪ್ರಮಾಣೀಕರಿಸಲಾಯಿತು)

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ : 14.05.2026 ರಂದು ಓದಲಾಯಿತು. )

ದಿನಾಂಕ: 14.05.2026
ಸ್ಥಳ : ಹೊಸದುರ್ಗ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸದುರ್ಗ.

ಆರೋಪಿತರ ಸಹಿ: